ಶ್ರೀ ಎಸ್. ಕರಿಯಪ್ಪ.—ಈ ದೇವಸ್ಥಾನ ಈಗಾಗಲೇ ಪೂರ್ತಿಯಾಗಿ ಜೀರ್ಣವಾಗಿ ಹೋಗುತ್ತಿದೆ ಎನ್ನುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಸ್ಥಳೀಯ ಅಧಿಕಾರಿಗಳಿಂದ ರಿಪೋರ್ಟ್ ತರಿಸಲು ಹೇಳಿದ್ದೇವೆ.

ಶ್ರೀ ಎಸ್. ಕರಿಯಪ್ಪ.—ಇನ್ನು ಎಷ್ಟು ದಿವಸಗಳಲ್ಲಿ ತಾವು ಇದನ್ನು ರಿಪೇರಿ ಮಾಡುತ್ತೀರಿ ?

ಶ್ರೀ ಎ. ಜಿ. ರಾಮಚಂದ್ರರಾವ್.—ರಿಪೋರ್ಟ್ ಬಂದಕೂಡಲೆ ಅದನ್ನು ಪರಿಶೀಲನೆ ಮಾಡಲಾಗುತ್ತದೆ.

ಶ್ರೀ ಎಸ್. ಕರಿಯಪ್ಪ.—ಇದನ್ನು ಇನ್ನು ಒಂದು ವರ್ಷದೊಳಗಾಗಿ ಅದರೂ ರಿಪೇರಿ ಮಾಡಿಸುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಮಾಡಿಸುತ್ತೇವೆ.

Road from Hirisave to Nonavinakere.

Q.—848. **Sri K. LAKKAPPA** (Channarayapatna).—

Will the Government be pleased to state :—

(*a*) whether any estimate has been prepared to form a road from Hirisave to Nonavinakere in Channarayapatna and Thuruvekere taluks;

(*b*) from how long this proposal is pending with the Government;

(*c*) whether they have sanctioned the estimate of this road ?

A.—**Sri T. CHANNIAH** (Minister for Public Health and Local Self-Government).—

(*a*) Yes.

(*b*) Since October 1954.

(*c*) No.

ಶ್ರೀ ಕೆ. ಲಕ್ಕಪ್ಪ.—(ಬಿ) ಪ್ರಶ್ನೆಗೆ ಉತ್ತರವಾಗಿ 1954ನೆಯ ಇಸವಿ ಅಕ್ಟೋಬರ್‌ನಿಂದ ಎಂದು ಉತ್ತರ ಕೊಟ್ಟಿದ್ದೀರಿ. ಈ ರಸ್ತೆ ಮಾಡಿಸಲು ಸೆಂಟ್ರಲ್ ರೋಡ್ ಫಂಡಿನಿಂದ ಪೊಬಲಗನ್ನು ಕೊಟ್ಟಿದ್ದು ಆ ಬಗ್ಗೆ ಬಡ್ಜೆಟ್ಟಿನಲ್ಲಿ ಹಣವನ್ನು ಒದಗಿಸಲಾಗಿದ್ದ ಅಂಶ ತಮಗೆ ಗೊತ್ತಿದೆಯೇ ?

ಶ್ರೀ ಟಿ. ಚನ್ನಯ್ಯ.—ಆ ವಿಚಾರ ನನಗೆ ಗೊತ್ತಿಲ್ಲ.

ಶ್ರೀ ಕೆ. ಲಕ್ಕಪ್ಪ.—ಈ ರಸ್ತೆಯನ್ನು ಮಾಡಿಸುವುದಕ್ಕೆ ಈಗ ತಾವೇನು ಕಾರ್ಯಕ್ರಮ ಕೈಗೊಂಡಿದ್ದೀರಿ ?

ಶ್ರೀ ಟಿ. ಚನ್ನಯ್ಯ.—ಈ ರಸ್ತೆ ಕಾರ್ಯವನ್ನು ಕೈಗೊಳ್ಳಲು ತುಮಕೂರು ಜಿಲ್ಲಾ ಬೋರ್ಡಿನವರಿಗೆ ಸಾಧ್ಯವೇ ಎನ್ನುವ ವಿಚಾರ ಕೇಳಿದೆ. ಆದರೆ ಅವರೀಗ ಈ ನೊಣವಿನಕೆರೆಗೆ ಹೋಗತಕ್ಕ ರಸ್ತೆಕಾಂಗಾರಿಯನ್ನು ಕೈಗೊಳ್ಳುವುದು ಅನಾವಶ್ಯಕ. ಅಲ್ಲೂರು, ಹಿರಿಸಾವೆ, ಕಣಕಟ್ಟೆ ಮೂಲಕ ಹೋಗತಕ್ಕಂಥ ರಸ್ತೆಯನ್ನು ರಿಪೇರಿ ಮಾಡಿದರೆ ಅನುಕೂಲವಾಗಿರುತ್ತೆಂದು ಹೇಳಿದ್ದಾರೆ. ಈ ಬಗ್ಗೆ ನಾವೀಗ ಚೀಫ್ ಇಂಜಿನಿಯರ್ ಅವರ ಅಭಿಪ್ರಾಯ ತಿಳಿಸಬೇಕೆಂದು ಕೇಳಿದ್ದೇವೆ. ಅವರಿನ್ನೂ ತಿಳಿಸಿಲ್ಲ.

ಶ್ರೀ ಕೆ. ಲಕ್ಕಪ್ಪ.—ತುಮಕೂರು ನರಹಳ್ಳಿನೊಳಗಿರುವ ರಸ್ತೆ ಕೆಲಸವಾಗಿದ್ದು ಹಾಸನ ಜಿಲ್ಲಾ ನರಹಳ್ಳಿನೊಳಗಿರುವುದು ಆಗಿಲ್ಲ, ಆದುದರಿಂದ ಆ ರಸ್ತೆ ರಿಪೇರಿ ಅನಾವಶ್ಯಕ ಎಂದು ಅವರು ಹೇಳಿದ್ದಾರೆಂಬ ಅಂಶ ತಮ್ಮ ಗಮನಕ್ಕೆ ಬಂದಿದೆಯೇ ? ಅವರಾದರೂ ಇದರ ಬಗ್ಗೆ ಹೇಗೆ ಅಭಿಪ್ರಾಯ ಕೊಡಬಲ್ಲರು ?

ಶ್ರೀ ಟಿ. ಚನ್ನಯ್ಯ.—ಹಾಸನ ಜಿಲ್ಲಾ ಬೋರ್ಡಿನವರನ್ನು ಸಹ ಕೇಳಿದ್ದೇವೆ. ಅವರಿಂದ ಇನ್ನೂ ಉತ್ತರ ಬಂದಿಲ್ಲ.

ಶ್ರೀ ಕೆ. ಲಕ್ಕಪ್ಪ.—ಇದರ ಅಂದಾಜು ಎಷ್ಟೆಂದು ಕೇಳಿದ್ದೀರಾ ?

ಶ್ರೀ ಟಿ. ಚನ್ನಯ್ಯ.—ಹಾಸನ ಜಿಲ್ಲಾ ಬೋರ್ಡಿನವರ ಅಭಿಪ್ರಾಯ ಬಂದನಂತರ ಅದನ್ನು ಕೇಳಲಾಗುವುದು.

ಶ್ರೀ ಕೆ. ಲಕ್ಕಪ್ಪ.—ಒಂದು ವೇಳೆ ಜಿಲ್ಲಾ ಬೋರ್ಡಿನವರು ಸಾಕಷ್ಟು ಹಣವಿಲ್ಲ ಎಂದು ಹೇಳಿದರೆ ಸೆಂಟ್ರಲ್ ರೋಡ್ ಫಂಡಿನಿಂದ ಹಣವನ್ನು ಖರ್ಚು ಹಾಕಿ ಈ ಕಾರ್ಯವನ್ನು ಕೈಗೊಳ್ಳುವುದಕ್ಕಾಗುವುದಿಲ್ಲವೇ ?

ಶ್ರೀ ಟಿ. ಚನ್ನಯ್ಯ.—ಚೀಫ್ ಇಂಜಿನಿಯರ್ ಅವರ ಅಭಿಪ್ರಾಯ ಬರಬೇಕು. ಉಳಿದಿದ್ದು ಅನಂತರ. ಈ ರಸ್ತೆಯನ್ನು ಜಿಲ್ಲಾ ಬೋರ್ಡಿನವರು ನಡೆಸಬೇಕೆ ಅಥವಾ P. W. D. ಅವರು ಕೈಗೊಳ್ಳಬೇಕೆ, ಇತ್ಯಾದಿ ವಿಚಾರಗಳನ್ನೆಲ್ಲಾ ಪರಿಶೀಲನೆ ಮಾಡಲಾಗುತ್ತದೆ.

ಶ್ರೀ ಕೆ. ಲಕ್ಕಪ್ಪ.—ಈಗಾಗಲೇ ಆ ಹಾಸನ ಜಿಲ್ಲೆಯ ನರಹಳ್ಳಿನೊಳಗೆ ಎಷ್ಟು ಮೈಲಿ ರಸ್ತೆ ಮಾಡಬೇಕಾಗಿರುತ್ತೆಂಬ ಬಗ್ಗೆ ಅಂದಾಜು ತಯಾರಿಸಲಾಗಿರುತ್ತದೆಯೆಂಬ ಅಂಶ ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಈಗ ಆ ವಿಚಾರ ಸರ್ಕಾರದವರಿಗೆ ಗೊತ್ತಿಲ್ಲ. ಬಂದರೆ ವಿಚಾರ ಮಾಡುತ್ತೇವೆ.

Krishnarajendra Hospital (Construction of a Surgical Ward).

Q.—795. **Sri K. PUTTASWAMY** (Srirangapatna).—

Will the Government be pleased to state :—

(*a*) the sanctioned bed strength and establishment of the Krishnarajendra Hospital, Mysore;

(*b*) the average number of in-patients in the year 1953 and 1954 and the establishment that existed in those years;

(*c*) whether there is a proposal to construct a surgical ward attached to the above hospital (the steps that are taken in that behalf) ?

A.—**Sri T. CHANNIAH** (Minister for Public Health and Local Self-Government).—

(*a*) Sanctioned bed strength.—300 beds.

Establishment.—Please see Statement Appended.

(*b*) Average number of in-patients :

1953	...	430·9
1954	...	588·8